Reg No. M 1299 (Founded 1917) Daily & Weekly

SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 173] ಶನಿವಾರ 31—3—45 [3 ಪೈ

ಬಿ. ಪರೀಕ್ಷೆ

ಇದೇ ಮಾಹ 21 ರಿಂದ 29 ರ ವರೆವಿಗೆ ನಡೆದ ಮೈಸೂರುಎಸ್. ಎಸ್. ಎಲ್. ಸಿ. ಪಬ್ಲಿಕ್ ಪರೀಕ್ಷೆಯ ಪ್ರಶ್ನ ಪತ್ರಿಕೆಗಳು ಪರೀಕ್ಷೆಗೆ ಮುನ್ನವೇ ಹೊರ ಬಿದ್ದ ವೆಂದು ಹೇಳಲಾಗಿದೆಯೆಷ್ಟೆ. ಇದಕ್ಕಾಗಿ ಮುಂದಿನ ತಿಂಗಳು 25 ರಿಂದ ಪುನಃ ಪಬ್ಲಿಕ್ ಪರೀಕ್ಷೆಯು ನಡೆಯು ವುದೆಂಬುದಾಗಿ ಪ್ರಬಲವಾದ ವದಂತಿ ಹುಟ್ಟಿದೆ.



ಐ.ಜೆ. ಹಾಲ್, ಸರಾಫ್ ಅಂಗಡಿ ರವೇ ಬೀದಿ, ಮೈಸೂರು.

ಜಪಾನಿಗೆ ರಷ್ಯದ ಭಯ

ಚುಂಕಿಂಗಿನಿಂದ ಬಂದಿರುವ ವಾರ್ತೆಯಂತೆ, ಮಂಚೂರಿಯಾದ ಉತ್ತರ ಪ್ರಾಂತ್ಯದ ಮೂಲಕ ರಷ್ಯನರು ಜಪಾನರ ಮೇಲೆ ಮುತ್ತುವ ಭಯವು ಜಪಾನಿಗಿರುವುದೆಂದೂ, ಹೇಳಲಾಗಿದೆ.

ಂ ಂ ಂ

ನ್ಯೂ ಡೆಲ್ಲಿಯಿಂದ ಹೋಂ-ಮೆಂಬರರಿಗೆ ಲಂಡನ್ನಿಗೆ ಬರಲು ಕರೆ ಬಂದಿದೆ. ಮುಖಂಡರ ಬಿಡುಗಡೆ ಬಗ್ಗೆ ವಿಷಯ ಲಂಡನ್ನಿನಲ್ಲಿಯೇ ಯೋಚಿಸಲಾಗುತ್ತಿದೆಯೆಂದು ಹೇಳಲಾಗಿದೆ.

ಂ ಂ ಂ

ಹಿಟ್ಲರ್, ಹಿಮ್ಲರ್, ಮುಸೋಲಿನಿ ಟೋಕಿಯೋಗೂ, ರಿಬ್ಬನ್‌ಟ್ರಾಪ್ ಜೊತೆ ಜರ್ಮನ್ ನಿದೇಶಾಂಗ ಮಂತ್ರಿ ಮಂಡಲವೆಲ್ಲಾ ಸ್ವಿಸ್ ಗಡಿಯಾಕಾನ್ ಸ್ಪೈನ್ಸಿಗೂ ಹೊರಟಿರುವುದಾಗಿ ತಿಳಿದು ಬಂದಿದೆ.

ಂ ಂ ಂ ಂ

ಡ್ಯೂಕ್ ಆಫ್ ವಿಂಡ್ಸರರಿಗೆ ಕೆನಡ ಗೌರ್ನರರ ಪದವಿ ಬೇಕಂತೆ. ಆದರೆ ಅದು ಸಿಕ್ಕುವುದಿಲ್ಲವಂತೆ.

ಂ ಂ ಂ ಂ

ಸ್ಕಾಟ್ ಫ್ರಾನ್ಸಿಸ್ಕೋಗೆ ಹೋಗುವ ಪ್ರಾಸಗಿ ಸದಸ್ಯರಿಗೆ ರೈಲ್ವೆ ಸಾಕರ್ಯ ಮನ್ನಾ ಮಾಡಿರುವುದರಿಂದ ಅಡಚಣೆಯೂಗಿದೆ.

Recruits will be interviewed for the Technical Branches of the

NAVY, ARMY & AIR FORCE

at the following towns on dates as under:—

Vacancies exist for CLERKS & TECHNICIANS in all Branches of the Service.

Town	Date	Place of Interview
MYSORE	2nd to 4th April 1945	Mr. Theobald's Bungalow Church Road Mysore
HUNSUR	5th April 1945	Traveller's Bungalow
VIRAJPET	6th to 7th April 1945	Inspection Bungalow
MERCARA	7th to 9th April 1945	North Coorg Club
MANDYA	10th to 11th April 1945	Travellers' Bungalow

ಸಂಸ್ಥಾನದ ಸುದ್ದಿಗಳು

ಬೆಂಗಳೂರಿನಿಂದ ನಿನ್ನೆ ರಾಜಧಾನಿಗೆ ದಿವಾನರು ಆಗಮಿಸಿದರು. ಇಲ್ಲಿ 1-2 ದಿನವಿದ್ದು, ನಂತರ ನೀಲಗಿರಿಗೆ ಪ್ರಯಾಣ ಮಾಡುವರು.

ಚಿತ್ರದುರ್ಗ ತಾಲ್ಲೂಕು ಸೊಂಡೆಕೆಳ ಗ್ರಾಮದಲ್ಲಿ ಕಳೆದ ಶನಿವಾರ, ಹರಿಜನ ಕೇರಿಯಲ್ಲಿ ಭಾರಿ ಬೆಂಕಿ ಬಿದ್ದು ಒಬ್ಬನು ಗತಪ್ರಾಣನಾದನೆಂದೂ, 67 ಮನೆಗಳು ಭಸ್ಮ ಭೂತವಾದವೆಂದೂ, ನಿರಾಶ್ರಿತರಾದವರಿಗೆ ಸಹಾಯವನ್ನು ನೀಡ ಬೇಕೆಂದೂ ಶಾಸನ ಸಭಾಧ್ಯಕ್ಷರು ಕೋರಿರುವರೆಂದು ತಿಳಿಯಬಂದಿದೆ.

ಬಂಗಾಳ ಅಸೆಂಬ್ಲಿಯಲ್ಲಿ ನಜಮುದ್ದೀನ್ ಸರ್ಕಾರಕ್ಕೆ ಸೋಲಾದರೂ, ರಾಜೀನಾಮೆ ಕೊಡಲು ನಿರಾಕರಿಸಿದ್ದಾರೆ. ಸಂಬಿಕೆ ಪಡೆಯಲು ಮತ್ತೆ ಪ್ರಯತ್ನಿಸುವವರಾಗಿದ್ದಾರೆ.

ವಿವಿಧ ವಿಷಯ

ಸಿಂದ್ ಅಸೆಂಬ್ಲಿಯಲ್ಲಿ ಒಬ್ಬ ಸದಸ್ಯರು ಈಗ 6 ವರ್ಷಗಳಿಂದ ಇಂಗ್ಲೀಷ್ ಭಾಷೆ ಬಾರದೆ ಮೌನದಿಂದ ಕೂತಿರುತ್ತಿದ್ದರು. ಅವರು ಇಂಗ್ಲೀಷು ಕಲಿತು ಈಗ ಇಂಗ್ಲೀಷ್ ಭಾಷೆಯಲ್ಲೇ ಮಾತನಾಡಲು ಉಪಕ್ರಮಿಸಿದರು.

ಂ ಂ

ಲೂಡಿಯಾನದತ್ತಿರ ವಿಕ್ಟರಿ ಜಾತ್ರೆಯಾಯಿತು. ಆ ಕಾಲದಲ್ಲಿ ಸೂಳೇರ ನರ್ತನ, ಹಾಡುಗಾರಿಕೆ ಮಾಡಿದವರಿಗೆ ಎರಡು ಲಕ್ಷ ರೂಪಾಯಿ ಮೇಲೆಯೇ ವೆಸೂಲಾಯಿತು, ಈ ವಿಷಯ ಕೇಂದ್ರ ಸಭೆಯಲ್ಲಿ ತೀವ್ರವಾಗಿ ಖಂಡಿಸಲಾಯಿತು.

ಂ ಂ

ನೀರಿನ ಮಟ್ಟ ಕಮ್ಮಿ ಇರುವುದರಿಂದ ಬೃಂದಾವನದ ದೀಪೋತ್ಸವವು ಹಂಗಾಮಿಯಾಗಿ ನಿಲ್ಲಿಸಿದೆ.

ಂ ಂ

ಬೆಂಗಳೂರಿನ ಜಯಚಾಮರಾಜೇಂದ್ರ ಇನ್‌ಸ್ಟಿಟ್ಯೂಟಿಗೆ ಮದರಾಸಿನ ಡಾಕ್ಟರ್ ಕೆ. ದ್ವಾರಕಾನಾಥರನ್ನು ನೇಮಿಸಲಾಗಿದೆ.

ಂ ಂ

ಹೊಗೆಸೊಪ್ಪಿನ ಮೇಲಣ ಎಕ್ಸೈಜು ಸುಂಕದ ತಿದ್ದುಪಡಿ ಜರೂರಾತಿ ಕಾನೂನು ಶ್ರೀಮನ್ಮಹಾರಾಜರವರ ಅನುಮತಿ ಪಡೆದು ಈಗಿನಿಂದಲೆ ಜಾರಿಗೆ ಬಂದಿದೆ.

ಂ ಂ

ಮೈಸೂರು ನ್ಯಾಯವಿಧಾಯಕ ಸಭೆಯು 20—6—44 ರಲ್ಲಿ ಸೇರುವುದು. 21—6—45 ರಲ್ಲಿ ಜೊಸ ಅಧ್ಯಕ್ಷ ಚುನಾವಣೆ ಮಾಡಲಾಗುವುದು.

ಂ ಂ

ರಾಜಧಾನಿಯಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆ ಪ್ರಶ್ನೆಗಳು ಪರೀಕ್ಷೆಗೆ ಮುಂಚಿಯೇ ಅನೇಕ ವಿದ್ಯಾರ್ಥಿಗಳಿಗೆ ತಿಳಿದಿತ್ತೆಂದು ಜನರಾಡಿಕೊಳ್ಳುತ್ತಿರುವುರು.

ಂ ಂ

ಯುದ್ಧ ಮುಗಿದ ನಂತರ ಪ್ರಪಂಚದ ಎಲ್ಲಾ ವಾರ್ತಾಕಾರರಿಗೆ ಸಂಪೂರ್ಣ ಅಧಿಕಾರವಿರಬೇಕೆಂದು 10 ರಲ್ಲಿ 7 ಮಂದಿಯಂತೆ ಅಭಿಪ್ರಾಯವಾದಲ್ಲಿ ಬಿಬಲವಿಶ್ವಾಸ.

ವಾರ್ತಾತರಂಗ

ಭಾರತಕ್ಕೆ ವಿದೇಶದಿಂದ ಆಮದಾಗುವ ಬಹು ತೆಳುವಾದ ಬಟ್ಟೆ 20 ಮಿಲಿಯ್ಡ್ ಗಜ. ಭಾರತದಲ್ಲಿ ತಯಾರಾಗುವುದು ಕೇವಲ 5 ಮಿಲಿಯ್ಡ್ ಗಜ.

ಂ ಂ

ಮಿತ್ರರು ಯೂರೋಪಿನಲ್ಲಿ ಡಿ-ಡೇ ಯುದ್ಧದಿಂದ ಇದುವರೆವಿಗೆ 1116061 ಜರ್ಮನ್ ಸೈನಿಕರನ್ನು ಕೈದಿಗಳನ್ನಾಗಿ ಹಿಡಿದಿರುವರು.

ಂ ಂ

ವರ್ಷಕ್ಕೆ ಭಾರತಕ್ಕೆ ಬೇಕಾದದ್ದು 5-16 ಮಿಲಿಯ್ಡ್ ಎಲಕ್ಟ್ರಿಕ್ ಬಲ್ಬುಗಳು ಭಾರತದಲ್ಲಿ ತಯಾರಾಗುವುದು 9 ಲಕ್ಷ ಬಲ್ಬುಗಳು.

ಂ ಂ

ಭಾರತದಲ್ಲಿ ವರ್ಷಕ್ಕೆ 70-80 ಸಾವಿರ ಸೈಕಲುಗಳು ತಯಾರಾಗುವುದೆಂದು ಹೇಳಿದರು. ಮಾರಲಿಕ್ಕೆ ಬರುವುದು ಕೇವಲ 20-30 ಸಾವಿರವಂತೆ.

ಂ ಂ

ಕಾಲೇಜಿನ ಉಪಾಧ್ಯಾಯರ ಸಂಬಳ ರೂ. 150 ಕ್ಕೂ ಕಮ್ಮಿ ಇರಬಾರದೆಂದು ಪಾಟ್ನಾ ವಿಶ್ವವಿದ್ಯಾನಿಲಯ ನಿಶ್ಚಯಿಸಿದೆ.

ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣ ಕಾಯಂ ಆಗಿ ಸ್ಥಾಪಿಸಲಾಗಿದೆ.

ಂ ಂ

ಕಾರ್ಡಿನೆಲ್ ಮತ್ತು ಮಿ| ಚರ್ಚಿಲ್ಲರು ಇಷ್ಟರಲ್ಲಿ ಕಲೆತ ಭಾರತದ ವಿಷಯವನ್ನು ಪರೀಶಿಲಿಸುವರು.

ಂ ಂ

ಅಮೇರಿಕಾದಲ್ಲಿ ಜನರಲ್ ಕ್ಲಾರ್ಕರವರು ಭಾರತೀಯ ವೃತ್ತಪತ್ರಿಕಾಕಾರರ ಸಂಗಡ ಮಾತನಾಡುತ್ತಾ ಭಾರತೀಯರು ಈಗಿನ ಯುದ್ಧದಲ್ಲಿ ಒಳ್ಳೆಯವಾಗಿ ತ್ಯಾಗಮಾಡಿರುತ್ತಾರೆಂದು ಹೇಳಿದರು.

ಂ ಂ

ಭಾರತಕ್ಕೆ ಆಹಾರ ಮತ್ತು ಔಷಧಿಗಳನ್ನು ಕಳಿಸಲು ಅಮೇರಿಕಾದ ಫ್ರೆಂಡ್ಸ್ ಸರ್ವಿಸ್ ಕಮಿಟಿಯವರು ಇದೇ ಏಪ್ರಿಲ್ 3 ರಿಂದ 10 ಲಕ್ಷ ಡಾಲರ್ ಜಂಬಾ ವಸೂಲ್ ಮಾಡುವುದಾಗಿರುವುದು.

ಂ ಂ

ಅಮೇರಿಕಾದಲ್ಲಿ ಶೇಕಡಾ 50 ರಂತೆ ಸ್ತ್ರೀಯರು ಸೇನೆ ಡಿಪೋಗಳಲ್ಲಿ ಕೆಲಸ ಮಾಡುತ್ತಿರುವರು.



ಯುದ್ಧಾನಂತರ ಬ್ರಿಟನ್ನಲ್ಲಿ ಉಕ್ಕಿಂದ ಕಟ್ಟಬೇಕೆಂದಿರುವ ಮನೆಗಳ ಮಾದರಿ ಚಿತ್ರ

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit ❁ Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿ ದುನಿಯಾ

(ಹಿಂದಿ)

ನುಮ್ತಾಜ್ ಶಾಂತಿ ಸೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್ 2 ನೇ ವಾರ

ಸೋತಿಲಾಲ್, ನೂರ್‌ಜಹಾ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಆದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸ್ಟೋಪ್ ಫ್ಯಾಕ್ಟರಿ, ಬೆಂಗಳೂರು

ಫೌಂಟ್ ಪೆನ್

ಫೌಂಟ್‌ಪೆನ್ ಈಚಿಗೆ ಬಂದದ್ದು ರಷ್ಯಾದಲ್ಲಿ ಒಂದು ಪುರಾತನ ಕಾಲದಿಂದಲೂ ಇಲ್ಲಿ ಉಪಯೋಗದಲ್ಲಿದೆ.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಬೆಕ್ಕಿಗೆ ಅಭಾವ

ಚುಂಕಿಂಗ್‌ನಲ್ಲಿ ಜನರಿಗೆ ತಿನ್ನಲಿಕ್ಕೆ ಇಲ್ಲದಿದ್ದರೂ ಬೆಕ್ಕುಗಳು ಸುಖ ಜೀವನ ಮಾಡುತ್ತಿರುವವು. ಅಲ್ಲಿ 50 ಲಕ್ಷ ಇಲಿಗಳು ಇವೆಂದು ಲೆಖ್ಖಾಚಾರ ಮಾಡಲಾಗಿದೆ. (ಸೆನ್ಸಸ್ ತೆಗೆದುಕೊಂಡರೋ?) ಇದಕ್ಕಾಗಿ ಬೆಕ್ಕಿಗೆ ದರಾಕಿ ಹೆಚ್ಚಿದೆ. ಒಂದೊಂದು ಬೆಕ್ಕಿಗೆ 2500 ಡಾಲರ್ ಕೊಟ್ಟರೂ ಸಿಗುವಂತಿಲ್ಲ.